# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2101
ಸದಸ್ಯರ ಹೆಸರು : ಶ್ರೀ ಮಾನೆ ಶ್ರೀನಿವಾಸ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 25.03.2021.
ಉತ್ತರಿಸುವವರು : ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಸರ್ಕಾರದ ವತಿಯಿಂದ ರಾಜ್ಯದಲ್ಲಿರುವ ಖಾದಿ ಸಂಘ ಸಂಸ್ಥೆಗಳಿಗೆ ವಾರ್ಷಿಕವಾಗಿ ಅನುದಾನವನ್ನು ಬಿಡುಗಡೆಗೊಳಿಸುವ ಯೋಜನೆ ಸರ್ಕಾರದ ಮುಂದಿದೆಯೇ; | ರಾಜ್ಯದಲ್ಲಿರುವ ಖಾದಿ ಸಂಘ-ಸಂಸ್ಥೆಗಳಿಗೆ 2012-13ನೇ ಸಾಲಿನಿಂದ ಖಾದಿ ಉತ್ಪಾದನಾ ವೆಚ್ಚದ ಶೇ.15ರಷ್ಟು ಮೊತ್ತವನ್ನು "ಮಾರುಕಟ್ಟೆ ಅಭಿವೃದ್ಧಿ ಸಹಾಯಧನ" (ಎಂ.ಡಿ.ಎ) ಎಂದು ನೀಡುವ ಯೋಜನೆಯನ್ನು ಮತ್ತು 2013-14ನೇ ಸಾಲಿನಿಂದ ಖಾದಿ ಕುಶಲಕರ್ಮಿಗಳಿಗೆ ನೀಡಲು ಪ್ರೋತ್ಸಾಹ ಮಜೂರಿ ಯೋಜನೆಯನ್ನು ರಾಜ್ಯ ಸರ್ಕಾರವು ಜಾರಿಗೊಳಿಸಿರುತ್ತದೆ. |
| ಆ) | ಇದ್ದಲ್ಲಿ, ಈ ಸಂಸ್ಥೆಗಳಿಗೆ ವಾರ್ಷಿಕವಾಗಿ ಎಷ್ಟು ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತಿದೆ; | ಖಾದಿ ಸಂಘ-ಸಂಸ್ಥೆಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಿದ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ (ಎಂ.ಡಿ.ಎ) ಹಾಗೂ ಪ್ರೋತ್ಸಾಹ ಮಜೂರಿ ಅನುದಾನದ ವಿವರ ಈ ಕೆಳಗಿನಂತಿದೆ. (ರೂ.ಲಕ್ಷಗಳಲ್ಲಿ) (ಕೆಳಗಿನ ಕೋಷ್ಟಕ ನೋಡಿ) |

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ವರ್ಷ | ಎಂ.ಡಿ.ಎ. | ಪ್ರೋತ್ಸಾಹ ಮಜೂರಿ |
|---|---|---|---|
| 1. | 2018-19 | 1700.00 | 1700.00 |
| 2. | 2019-20 | 1500.00 | 1500.00 |
| 3. | 2020-21 | 1500.00 | 1500.00 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ಸನ್ 2018-19 ಹಾಗೂ 2019-20ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಖಾದಿ ಸಂಘ ಸಂಸ್ಥೆಗಳಿಗೆ ವಾರ್ಷಿಕವಾಗಿ ಎಷ್ಟು ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ; | (ಕೆಳಗಿನ ಕೋಷ್ಟಕ ನೋಡಿ) |

| ವರ್ಷ | ವಿವರ | ಸರ್ಕಾರದಿಂದ ಬಿಡುಗಡೆ ಮಾಡಿದ ಮೊತ್ತ. (ರೂ. ಲಕ್ಷಗಳಲ್ಲಿ) |
|---|---|---|
| 2018-19 | ಎಂ.ಡಿ.ಎ. | 1700.00 |
| | ಪ್ರೋ.ಮ | 1700.00 |
| 2017-20 | ಎಂ.ಡಿ.ಎ. | 1500.00 |
| | ಪ್ರೋ.ಮ | 1500.00 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಈ) | ಒಂದು ವೇಳೆ ಅನುದಾನವನ್ನು ಬಿಡುಗಡೆಗೊಳಿಸಲು ಬಾಕಿ ಇದ್ದರೆ, ವಿಳಂಬಕ್ಕೆ ಕಾರಣಗಳೇನು; | ಸರ್ಕಾರದಿಂದ ತ್ರೈಮಾಸಿಕವಾಗಿ ಬಿಡುಗಡೆ ಮಾಡಿದ ಅನುದಾನವನ್ನು ಮಂಡಳಿಯಿಂದ ಖಾದಿ ಸಂಘ-ಸಂಸ್ಥೆಗಳಿಗೆ ಆಯಾ ತ್ರೈಮಾಸಿಕಗಳಲ್ಲಿ ಬಿಡುಗಡೆ ಮಾಡಲಾಗುತ್ತಿದ್ದು, ಯಾವುದೇ ರೀತಿಯ ವಿಳಂಬವಾಗುವುದಿಲ್ಲ |
| ಉ) | ಬಾಕಿ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆಗೊಳಿಸಲಾಗುವುದು? | ಸಂಘ-ಸಂಸ್ಥೆಗಳಿಗೆ ಬಾಕಿ ಇರುವ ಅನುದಾನವನ್ನು ಸರ್ಕಾರದಿಂದ ಆದೇಶ ಸಂಖ್ಯೆ: ಸಿಐ 06 ಎಸ್.ಎಲ್.ವಿ 2021 ಬೆಂಗಳೂರು, ದಿನಾಂಕ:02.03.2021 ರಂತೆ ಮಂಡಳಿಗೆ **ಅನುಬಂಧ-1**ರಂತೆ ಬಿಡುಗಡೆ ಮಾಡಿದ್ದು, ಸಂಘ-ಸಂಸ್ಥೆಗಳಿಗೆ ಮಂಡಳಿಯಿಂದ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. |

**ಸಿಐ 08 ಎಸ್‌ಎಲ್‌ವಿ 2021**

*(ಸಿ.ಸಿ. ಪಾಟೀಲ್)*
ಸಣ್ಣ ಕೈಗಾರಿಕೆ ಹಾಗೂ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು.